ಕರ್ನಾಟಕ ಸರ್ಕಾರ

ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21

ಆಯುಕ್ತರವರ ಕಛೇರಿ
ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ
ಇಲಾಖೆ ಪಶುಪಾಲನ ಭವನ, ಬಳ್ಳಾರಿ ರಸ್ತೆ,
ಹೆಬ್ಬಾಳ, ಬೆಂಗಳೂರು-24 ದಿನಾಂಕ:14-06-2021

## ಮಾರ್ಪಾಡು ಅಧಿಸೂಚನೆ

ವಿಷಯ :- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ-371(ಜೆ)ರಂತೆ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 32 ಪಶುವೈದ್ಯಕೀಯ ಪರೀಕ್ಷಕರ ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ 1. ಕರ್ನಾಟಕ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ (ಕಲ್ಯಾಣ-ಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದಗಳ ಪಶುವೈದ್ಯಕೀಯ ಪರೀಕ್ಷಕರು ಹಾಗೂ ಪಶುವೈದ್ಯಕೀಯ ಸಹಾಯಕರುಗಳ ನೇಮಕಾತಿ(ವಿಶೇಷ) ನಿಯಮಗಳು-2019ರ ಅಧಿಸೂಚನೆ ಸಂಖ್ಯೆ: ಪಸಂಮಿಲ/26/ ಪಅವಿ/ 2018, ದಿನಾಂಕ:11-02-2020.

2. ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ-371(ಜೆ)ರಂತೆ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 32 ಪಶುವೈದ್ಯಕೀಯ ಪರೀಕ್ಷಕರ ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಈಗಾಗಲೇ ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21,ದಿನಾಂಕ:26-06-2020.

*****

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ 371(ಜೆ)ರ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಡಿ 32 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಉಲ್ಲೇಖ (1)ರ ನಿಯಮಗಳಿಗೆ ಒಳಪಟ್ಟು, ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಉಲ್ಲೇಖ(2)ರಂತೆ ಹೊರಡಿಸಲಾದ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಿದ್ದು ಅದರಂತೆ ತಿದ್ದಿ ಓದಿಕೊಳ್ಳತಕ್ಕದ್ದು.

| ದಿನಾಂಕ:26-06-2020ರ ಅಧಿಸೂಚನೆಯ ಕ್ರಮ ಸಂಖ್ಯೆ: | ದಿನಾಂಕ:26-06-2020ರ ಅಧಿಸೂಚನೆಯಲ್ಲಿರುವುದು | ಪ್ರಸ್ತುತ ಮಾಡಲಾದ ಮಾರ್ಪಾಡು |
|---|---|---|
| ಕ್ರಮ ಸಂಖ್ಯೆ 02) ನೇಮಕಾತಿ ವಿಧಾನ(2) | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:14-08-2020ರ (ಸಂಜೆ 5:30ರವರೆಗೆ) | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:16-08-2021ರ (ಸಂಜೆ 5:30ರವರೆಗೆ) |
| ಕ್ರಮ ಸಂಖ್ಯೆ 02) ನೇಮಕಾತಿ ವಿಧಾನ(3) ರಲ್ಲಿ ಹಾಗೂ ಕ್ರಮ ಸಂಖ್ಯೆ 04) ಅರ್ಜಿ ಶುಲ್ಕ (2)ರಲ್ಲಿ | ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:19-08-2020 (ಅಂಚೆ ಕಚೇರಿ ಕರ್ತವ್ಯದ ವೇಳೆ ವರೆಗೆ) | ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:20-08-2021 (ಅಂಚೆ ಕಚೇರಿ ಕರ್ತವ್ಯದ ವೇಳೆ ವರೆಗೆ) |

---2

| | | |
|---|---|---|
| ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ **I (1)** | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಬಿ.ಎಸ್ಸಿ ಪದವಿಯಲ್ಲಿ ಪ್ರಾಣಿಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ಪದವಿಯನ್ನು ಪಡೆದಿರಬೇಕು. | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಬಿ.ಎಸ್ಸಿ ಪದವಿಯಲ್ಲಿ ಪ್ರಾಣಿಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ಪದವಿಯನ್ನು ಪಡೆದಿರಬೇಕು. |
| ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ **I (2)** | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಅಗತ್ಯ ಖಾಲಿ ಹುದ್ದೆಗಳಿಗಾಗಿ ಬಿ.ಎಸ್ಸಿ (ಪ್ರಾಣಿಶಾಸ್ತ್ರ) ಅಭ್ಯರ್ಥಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಯಾವುದೇ ವಿಜ್ಞಾನ ಪದವಿಯಲ್ಲಿ, ಪದವಿಯನ್ನು ಪಡೆದಿರುವ ಮತ್ತು ಪಿ.ಯು.ಸಿ.ಯಲ್ಲಿ ಐಚ್ಛಿಕ ವಿಷಯವನ್ನಾಗಿ ಜೀವಶಾಸ್ತ್ರವನ್ನು ಅಭ್ಯಸಿಸಿರಬೇಕು | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಅಗತ್ಯ ಖಾಲಿ ಹುದ್ದೆಗಳಿಗಾಗಿ ಬಿ.ಎಸ್ಸಿ (ಪ್ರಾಣಿಶಾಸ್ತ್ರ) ಅಭ್ಯರ್ಥಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಯಾವುದೇ ವಿಜ್ಞಾನ ಪದವಿಯಲ್ಲಿ, ಪದವಿಯನ್ನು ಪಡೆದಿರುವ ಮತ್ತು ಪಿ.ಯು.ಸಿ.ಯಲ್ಲಿ ಐಚ್ಛಿಕ ವಿಷಯವನ್ನಾಗಿ ಜೀವಶಾಸ್ತ್ರವನ್ನು ಅಭ್ಯಸಿಸಿರಬೇಕು |
| ಕ್ರಮ ಸಂಖ್ಯೆ 6) ಶೈಕ್ಷಣಿಕ ವಿದ್ಯಾರ್ಹತೆಯ **II (1)** | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಥವಾ ಯಾವುದೇ ಇತರ ವಿಶ್ವ ವಿದ್ಯಾಯಲಯವು ನಡೆಸಲಾದ ಪಶು ಆರೋಗ್ಯ (ಪಶುಸಂಗೋಪನೆ) ಡಿಪ್ಲೊಮೊ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಥವಾ ಯಾವುದೇ ಇತರ ವಿಶ್ವ ವಿದ್ಯಾಯಲಯವು ನಡೆಸಲಾದ ಪಶು ಆರೋಗ್ಯ (ಪಶುಸಂಗೋಪನೆ) ಡಿಪ್ಲೊಮೊ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ **II (2)** | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ನಿರ್ದೇಶಕರು, ವೃತ್ತಿ ಶಿಕ್ಷಣ (ಪದವಿ ಪೂರ್ವ ಶಿಕ್ಷಣ ಇಲಾಖೆ) ಕರ್ನಾಟಕ ಸರ್ಕಾರವು ನಡೆಸಲಾದ ಡೈರಿಗೆ ಸಂಬಂಧಿಸಿದ 02 ವರ್ಷಗಳ ಉದ್ಯೋಗ ಆಧಾರಿತ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು. | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ನಿರ್ದೇಶಕರು, ವೃತ್ತಿ ಶಿಕ್ಷಣ (ಪದವಿ ಪೂರ್ವ ಶಿಕ್ಷಣ ಇಲಾಖೆ) ಕರ್ನಾಟಕ ಸರ್ಕಾರವು ನಡೆಸಲಾದ ಡೈರಿಗೆ ಸಂಬಂಧಿಸಿದ 02 ವರ್ಷಗಳ ಉದ್ಯೋಗ ಆಧಾರಿತ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು. |

--3

**ಷರತ್ತುಗಳು:-**

1. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21,ದಿ:26-06-2020ರಂತೆ ದಿನಾಂಕ:01-07-2020 ರಿಂದ 07-07-2020ರವರೆಗೆ ಸಲ್ಲಿಸಲಾಗಿರುವ ಪರಿಪೂರ್ಣ ಮಾಹಿತಿ ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಿರುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
2. ಈ ಹಿಂದೆ ದಿನಾಂಕ:01-07-2020 ರಿಂದ 07-07-2020ರವರೆಗೆ **Online Recruitment System** ಮುಖಾಂತರ ನೇಮಕಾತಿಗಾಗಿ ಪರಿಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
3. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21, ದಿ:26-06-2020ರಂತೆ ಹುದ್ದೆಗಳ ವರ್ಗೀಕರಣ ಮುಂದುವರೆದಿರುತ್ತದೆ.
4. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21, ದಿ:26-06-2020ರಲ್ಲಿ ವಿಧಿಸಲಾಗಿದ್ದ ಷರತ್ತುಗಳು ಮುಂದುವರೆಯುತ್ತದೆ.

**ಜಂಟಿ ನಿರ್ದೇಶಕರು (ಆಡಳಿತ)**
**ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ**
**ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿ**
**ಇಲಾಖಾ ಆಯ್ಕೆ ಸಮಿತಿ**
**ಬೆಂಗಳೂರು - 560024**

**ಆಯುಕ್ತರು**
**ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ**
**ಹಾಗೂ ಪದನಿಮಿತ್ತ ಅಧ್ಯಕ್ಷರು, ಇಲಾಖಾ ಆಯ್ಕೆ ಸಮಿತಿ**
**ಬೆಂಗಳೂರು - 560024**

Sambhavane